# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## ಸಿ.ಸಿ. ಸಂಖ್ಯೆ: 723 /2024

**ಸಾಕ್ಷಿಯನ್ನು ದಿಃ 11.08.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಶಿವಶಂಕರ್ | ಸಿಡಬ್ಲ್ಯೂಃ 1 | ಪಿಡಬ್ಲ್ಯೂಃ 1 |
| ತಂದೆಯ ಹೆಸರು | ಸಣ್ಣತಮ್ಮಯ್ಯ | | |
| ವಯಸ್ಸು | 48 ವರ್ಷ | | |
| ಕೆಲಸ | ಹೂವಿನ ಡೆಕೋರೇಷನ್ | | |
| ವಾಸಸ್ಥಳ | ಕಲ್ಲುಣಿಕೆ | | |

## <u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ಚಾಸಾ-2 ನನ್ನ ಪತ್ನಿ, ಚಾಸಾ-3 ನನ್ನ ಮಗಳು, ಚಾಸಾ-4 ಮತ್ತು 5 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿಃ 04.03.2024 ರಂದು ಮಧ್ಯಾಹ್ನ ಸುಮಾರು 2 ಗಂಟೆಗೆ ಆರೋಗ್ಯ ಸರಿ ಇಲ್ಲದೇ ಇದ್ದ ಕಾರಣ ನಾನು ಮನೆಯಹಾಲ್ ನಲ್ಲಿ ಮಲಗಿದ್ದೆ. ಆಗ ನನ್ನ ಅಣ್ಣನಾದ ಎಸ್ ಮಹದೇವರವರು ಬಂದು, ನನ್ನ ಆಸ್ತಿ ಮತ್ತು ಸೈಟನ್ನು ತಾಯಿಯಿಂದ ಬರೆಸಿಕೊಂಡಿದ್ದಿಯಾ ಎಂದು ಕೂಗಾಡುತ್ತಾ ನನಗೆ ಹೊಡೆಯಲು ಬಂದಾಗ ನನಗೆ ಹೆದರಿಕೆ ಆಗಿ ಮನೆಯಿಂದ ಹೊರಗೆ ಓಡಿದೆ. ನಾನು ಹೊರಗೆ ಬಂದಾಗ ಅಲ್ಲಿ ನಿಂತಿದ್ದ ನನ್ನ ಅಣ್ಣನ ಹೆಂಡತಿಯಾದ ಆರೋಪಿ, ಆಕೆಯ ಮಗನಾದ ಜಿತೇಂದ್ರ ಮತ್ತು ಮಗಳಾದ ಪ್ರಿಯಾ 3 ಜನರು ನನ್ನನ್ನು ತಬ್ಬಿ ಹಿಡಿದುಕೊಂಡು ಅಪ್ಪಾ ಇವರನ್ನು ಬಿಡಬೇಡಾ ಹೊಡಿ ಹೊಡಿ ಎಂದು ಹೇಳಿದಾಗ, ನನ್ನ ಅಣ್ಣ ಎಸ್ ಮಹದೇವ್ ರವರು ನನ್ನ ತಾಯಿ ನಡೆಯಲು ಬಳಸುತ್ತಿದ್ದ ಊರುಗೋಲನ್ನು ತೆಗೆದುಕೊಂಡು ನನ್ನ ತಲೆಯ ನೆತ್ತಿಗೆ ಹೊಡೆದರು. ನನಗೆ ರಕ್ತಗಾಯ ಉಂಟಾಯಿತು. ನಾನು ಕಿರುಚಾಡಿದೆ. ಆಗ ಚಾಸಾ-2 ಮತ್ತು 3 ರವರು ಜಗಳ ಬಿಡಿಸಲು ಬಂದರು. ಅವರಿಗೂ ಕೂಡ ನನ್ನ ಅಣ್ಣ, ಆರೋಪಿ ಮತ್ತು ಅವರ ಮಕ್ಕಳು ಕೈಗಳಿಂದ ಹೊಡೆದರು. ಅವರೆಲ್ಲರೂ ನನ್ನನ್ನು ಉದ್ದೇಶಿಸಿ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ.

ಇನ್ನೊಂದು ಸಲ ನಮ್ಮ ವಿಚಾರಕ್ಕೆ ಬಂದರೆ ಕೊಲೆ ಮಾಡುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದರು. ನಂತರ ಚಾಸಾ-2 ಮತ್ತು 3 ರವರು ಆಟೋದಲ್ಲಿ ನನ್ನನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಬಂದು ನನ್ನ ಹೇಳಿಕೆಯನ್ನು ಸಂಜೆ 5 ರಿಂದ 5-30ರ ತನಕ ಪಡೆದುಕೊಂಡರು. ಆ ದಿನ ನನಗೆ ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು,ಮಾ-1 ಎಂದು ಗುರುತಿಸಲಾಯಿತು. ಆ ದಿನ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಮುಂದುವರಿದು, ಆರೋಪಿ ಕೇವಲ ಹಿಡಿದುಕೊಂಡಿದ್ದು,ಆಕೆಯ ಗಂಡ ಹಲ್ಲೆ ಮಾಡಿದ್ದಾರೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ. ಸಿ ಎಂ ವಕೀಲರಿಂದ:**

ನನ್ನ ತಂದೆಯ ಹೆಸರು ಸಣ್ಣ ತಮ್ಮಯ್ಯ. ತಾಯಿ ಸಿದ್ದಮ್ಮ. ನನ್ನ ತಂದೆ ತಾಯಿಗೆ 4 ಹೆಣ್ಣು ಮತ್ತು ಎರಡು ಗಂಡು ಮಕ್ಕಳು. ಮದುವೆಯಾಗುವವರೆಗೆ ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ವಾಸ ಇದ್ದೆವು ಎಂದರೆ ನನ್ನ ಅಣ್ಣ ನಮ್ಮ ಜೊತೆ ವಾಸವಿರಲಿಲ್ಲ. ನಮ್ಮ ಜಮೀನಿನ ಸರ್ವೇ ನಂಬರ್ ಗೊತ್ತಿಲ್ಲ. ನಮಗೆ ಒಂದು ಎಕರೆ ಜಮೀನು ಇದೆ. 100x 60 ಅಡಿ ಉದ್ದದ ಸೈಟ್ ಇದೆ. ಅದು ಪಿತ್ರಾರ್ಜಿತವಾಗಿದೆ. ಅದೇ ರೀತಿ ಪಕ್ಕದಲ್ಲಿ ಮಂಗಳೂರು ಹೆಂಚಿನ ಮನೆ ಇದೆ ಎಂದರೆ ಸೈಟ್ ನಲ್ಲಿಯೇ ಮನೆ ಇದೆ. ಗಲಾಟೆಯಾಯಿತು ಎನ್ನುವ ದಿನ ನಾನು ನನ್ನ ಸಹೋದರ ಮತ್ತು ಸಹೋದರಿಯರನ್ನು ಪಾಲು ಕೊಡುತ್ತೇನೆ ಬನ್ನಿ ಎಂದು ಕರೆದಿದ್ದೆ ಎಂದರೆ ಸರಿಯಲ್ಲ. ದಿ: 04.03.2024 ರಂದು ಆರೋಪಿ ಮತ್ತು ನನ್ನ ಸಹೋದರಿಯರು ನನ್ನ ಮನೆಯ ಹತ್ತಿರ ಮಾತನಾಡಲು ಬಂದಿದ್ದರು ಎಂದರೆ ಸರಿಯಲ್ಲ. ಏನು ಆಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಸಹೋದರಿಯರು ಮತ್ತು ಆರೋಪಿ ಬಂದು ಮಾತನಾಡೋಣ ಎಂದು ನನ್ನನ್ನು ಕರೆದರು ಎಂದರೆ ಇಲ್ಲ. ನನ್ನ ತಂದೆ ತಾಯಿಯ ಹೆಸರಿನಲ್ಲಿದ್ದ ಮನೆ, ಸೈಟ್ ಮತ್ತು ಗದ್ದೆಯನ್ನು ನಾನು, ನನ್ನ ಅಣ್ಣ ಮತ್ತು ಸಹೋದರಿಯರಿಗೆ ಗೊತ್ತಾಗದಂತೆ ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ವಿಲ್

ಮಾಡಿಸಿದೆ ಎಂದರೆ ಸರಿಯಲ್ಲ. ಆ ರೀತಿ ನನ್ನ ಸಹೋದರಿಯರು ಮತ್ತು ಆರೋಪಿ ಬಂದು ಕೇಳಿದಾಗ ನಾನೇ ಅವರ ಮೇಲೆ ಗಲಾಟೆ ಮಾಡಿದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಅಕ್ಕ–ಪಕ್ಕ ಸುಮಾರು ವಾಸದ ಮನೆಗಳು ಇವೆ. ನನ್ನ ಅಣ್ಣ ನಾನು ವಾಸ ಇರುವ ಪಕ್ಕದ ಮನೆಯಲ್ಲಿಯೇ ಇದ್ದಾರೆ ಎಂದರೆ ಇಲ್ಲ. ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪ ಇದ್ದಾರೆ. ಚಾಸಾ–4 ನನಗೆ ಸಂಬಂಧಿ ಅಲ್ಲ. ಚಾಸಾ–5 ನನಗೆ ತುಂಬಾ ಆತ್ಮೀಯರು ಎಂದರೆ ಸರಿ.

ಆರೋಪಿಯ ಮಗಳು ನಮ್ರತಾಳಿಗೆ ಮದುವೆಯಾದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ನನ್ನ ಸಹೋದರಿಯರು ಭಾಗಕೇಳಲು ಬಂದಿದ್ದಾರೆ ಎಂಬ ಕಾರಣಕ್ಕಾಗಿ ನಾನು ನಮ್ರತಾ ಯಾರ ಜೊತೆಯೋ ಓಡಿ ಹೋಗಿದ್ದಾಳೆ ಎಂದು ಪ್ರಚಾರ ಮಾಡಿದ್ದೆ ಎಂದರೆ ಸರಿಯಲ್ಲ. ನನ್ನ ಮಗಳಂತೆಯೇ ನಮ್ರತಾ ಕೂಡ ಅವಳ ಭವಿಷ್ಯ ಹಾಳಾಗುತ್ತದೆ ಎಂದು ಆರೋಪಿ ನನ್ನ ಬಳಿ ಕೇಳಿದರು ಎಂದರೆ ಇಲ್ಲ. ಆ ಸಮಯದಲ್ಲಿ ನಾನು ಮು.ಮಾ–1 ರಿಂದ ಆರೋಪಿಗೆ ಹೊಡೆದೆ ಎಂದರೆ ಸರಿಯಲ್ಲ. ನನ್ನ ಮೇಲೂ ಕೂಡ ಇದೇ ನ್ಯಾಯಾಲಯದಲ್ಲಿ ಸಿಸಿ ನಂ. 720/2024 ರಂತೆ ಪ್ರಕರಣ ದಾಖಲಾಗಿದೆ ಎಂದರೆ ಇಲ್ಲ. ಸದರಿ ಪ್ರಕರಣ ಇದೇ ನ್ಯಾಯಾಲಯದಲ್ಲಿ ಇದೆ ಎಂದರೆ ಸರಿ. ನಾನು ಆಟೋದಲ್ಲಿ ಆಸ್ಪತ್ರೆಗೆ ಹೋದೆ. ನನ್ನ ಹೇಳಿಕೆಯನ್ನು ಅನಿಲ್‌ಕುಮಾರ್ ಎಂಬ ಪೋಲಿಸರು ದಾಖಲಿಸಿಕೊಂಡಿದ್ದಾರೆ. ನನ್ನ ಹೇಳಿಕೆಯನ್ನು ಕೈಯಲ್ಲಿ ಬರೆದುಕೊಂಡಿದ್ದಾರೆ. ಅದರಲ್ಲಿ ಏನು ಒಕ್ಕಣೆ ಬರೆಯಲಾಗಿದೆ ಎಂದು ಗೊತ್ತಿದೆ. ನನ್ನ ತಲೆಗೆ ಏಟಾಗಿ ರಕ್ತ ಬಟ್ಟೆಗೆ ಆಯಿತು. ಬಟ್ಟೆಯನ್ನು ನಾನು ಪೋಲಿಸರಿಗೆ ಕೊಟ್ಟಿದ್ದೇನೆ. ನನ್ನ ಪತ್ನಿ ಮತ್ತು ಮಗಳು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ನಾನು ಸ್ವಂತ ಅಣ್ಣ ಮತ್ತು ಸಹೋದರಿಯರಿಗೆ ಮೋಸ ಮಾಡಿ ಸಂಪೂರ್ಣ ಆಸ್ತಿಯ ಬಗ್ಗೆ ಮೃತ್ಯು ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿ ಮತ್ತು ಆಕೆಯ ಮಕ್ಕಳಿಗೆ ಹೊಡೆದು ಅವರು ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಸರಿಯಲ್ಲ. ಮು.ಮಾ–1ರಂತಹ ದೊಣ್ಣೆಯನ್ನು ಹಳ್ಳಿಗಳಲ್ಲಿ ಅಡುಗೆಗೆ ಉಪಯೋಗಿಸುತ್ತಾರೆ. ಮು.ಮಾ–1 ನನ್ನ ತಾಯಿ ಉಪಯೋಗಿಸುತ್ತಿದ್ದ ಊರುಗೋಲು ಎಂದರೆ ಸರಿಯಲ್ಲ. ನಾನೇ ಮು.ಮಾ–1 ರಿಂದ ಆರೋಪಿ ಮತ್ತು ಆಕೆಯ ಮಕ್ಕಳಿಗೆ ಹೊಡೆದು ಅದನ್ನು ಪೋಲಿಸರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನೇ ಆರೋಪಿ ಮತ್ತು ಆಕೆಯ ಮಕ್ಕಳಿಗೆ ಹೊಡೆದು ಅವರು ನನಗೆ ಹೊಡೆದಿದ್ದಾರೆ ಎಂದು ಸುಳ್ಳು ದೂರು

ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಗುಂಪುಕಟ್ಟಿಕೊಂಡು ಹೊಡೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲೆ ಆದ ಕೇಸಿನಿಂದ ತಪ್ಪಿಸಿಕೊಳ್ಳಲೆಂದು ಈ ರೀತಿ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.

ನಾನು ಫೆಬ್ರವರಿ-2023 ರಿಂದ ಫೆಬ್ರವರಿ-2024 ರವರೆಗೆ ಆಗಿ ಹುಣಸೂರು ಪಟ್ಟಣ ಠಾಣೆಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.